**ದಿನಾಂಕಃ 13-04-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ. ವೈ.ಹೆಚ್.ಕೆ. ವಕೀಲರಿಂದಃ**

ನಾನು ಖಾಯಂ ಆಗಿ ಕೊಡಿಯಾಲ ಹೊಸಪೇಟೆಯಲ್ಲಿ ಮಸೂತಿಯ ಹಿಂದಿನ ಮನೆಯಲ್ಲಿ ವಾಸವಾಗಿದ್ದೇನೆ. ಆ ಮನೆ ನಂ.55/7 ಇರುತ್ತದೆ. 2017 ರಿಂದ ಆ ಮನೆಯಲ್ಲಿ ನಾನು ವಾಸವಾಗಿದ್ದೇನೆ. ನಾನು, ನನ್ನ ಹೆಂಡತಿ, ಇಬ್ಬರು ಮಕ್ಕಳು ಆ ಮನೆಯಲ್ಲಿ ವಾಸವಾಗಿದ್ದೇವೆ. ಅದಕ್ಕಿಂತ ಮೊದಲು ಬಿ ಎಸ್ ಮಾಳಿ ಎನ್ನುವವರ ಮನೆಯಲ್ಲಿ ಬಾಡಿಗೆ ಇದ್ದೇವು. ನಾನು ಅವರ ಮನೆಯಲ್ಲಿ ಸುಮಾರು 11 ವರ್ಷಗಳ ಕಾಲ ವಾಸವಾಗಿದ್ದೇವು. ನಾನು ವಿಪಿಸಿ ನಂ.705/12 ಎ ಇದನ್ನು ಖರೀದಿಸಿದ್ದೇನೆ. ರೂ. 5,10,000/- ರೂಗಳನ್ನು ಕೊಟ್ಟಿದ್ದೇನೆ. ಖರೀದಿಯ ಮಾತುಕತೆಯನ್ನು 2016 ಜುಲೈ ತಿಂಗಳಲ್ಲಿ ಮಾಡಿದ್ದೇವೆ. ಖರೀದಿ ಆಗುವ 1 ತಿಂಗಳು ಮೊದಲು ಮಾತುಕತೆಯಾಗಿತ್ತು. ಆ ಬಗ್ಗೆ ಬರವಣಿಗೆಯಾಗಿತ್ತು. ಆ ಬಗ್ಗೆ ಸಂಚುಕಾರ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸಂಚುಕಾರ ಪತ್ರ ಆದ ನಂತರ ನವೆಂಬರ್ ತಿಂಗಳಿನಲ್ಲಿ ಖರೀದಿ ಪತ್ರ ಆಗಿದೆ.

2. ಸಂಚುಕಾರ ಆದ ಪತ್ರ ಆದ ನಂತರ ಎಲ್ಲಾ ಹಣವನ್ನು ನಗದಾಗಿ ಕೊಟ್ಟಿದ್ದೇವೆ. ಮಾತುಕತೆಯಾದ ಸಮಯದಲ್ಲಿ ಅಬುಸ್ ಅಲಿ, ಗಣೇಶಪ್ಪ, ಚೆನ್ನಪ್ಪ, ಲಕ್ಷ್ಮಣ ಎನ್ನುವವರು ಇದ್ದರು. ಅವರೆಲ್ಲರೂ ಸಂಚುಕಾರ ಪತ್ರಕ್ಕೆ ಸಹಿ ಮಾಡಿದ್ದಾರೆ. ಕ್ರಯ ಪತ್ರ ಆಗುವ ಕಾಲಕ್ಕೆ ಮೇಲೆ ಹೇಳಿದ ಎಲ್ಲರೂ ಇದ್ದರು. ಅವರೆಲ್ಲರೂ ಅದಕ್ಕೆ ಸಹಿ ಮಾಡಿದ್ದಾರೆ. ನಾನು ಮಾಡಿಕೊಂಡ ಖರೀದಿ ಪತ್ರ ಪೋಕಳ್ ಖರೀದಿ ಪತ್ರ ಎಂದರೆ ಸರಿಯಲ್ಲ. ನಾನು ಖಲೀಲ್ ಸಾಬ್ ಇವರಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಒಂದು ತೋರುಗಾಣಿಕೆ ಕ್ರಯಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸುವ ಮೊದಲು ಇ ಸ್ವತ್ತು, ಖರೀದಿ ಉತಾರ, ಡ ಉತಾರ ನೋಡಿದ್ದೇನೆ. ಯಾರದಾದರೂ ಇದೆಯಾ ಎಂದು ಪಂಚಾಯಿತಿಯಿಂದ ಮಾಹಿತಿ ಪಡೆದುಕೊಂಡಿದ್ದೇನೆ. ವಿ ಪಿ ಸಿ ನಂ.702/12 ಎ ಇದು ಖಲೀಲ ಸಾಬ್ ಇವರಿಗೆ ವಾಟ್ನಿ ಮೂಲಕ ಬಂದಿದೆ ಎಂದು ದಾಖಲೆಯಲ್ಲಿ ನೋಡಿದ್ದೇನೆ. ಅದಕ್ಕೆ ಎಲ್ಲಾ ಕುಟುಂಬದ ಸದಸ್ಯರು ಸಹಿ ಮಾಡಿದ್ದರು. ನಾನು ವಾಟ್ನಿ ಪತ್ರ ನೋಡಿಲ್ಲ ಎಂದರೆ ಸರಿಯಲ್ಲ. ಆ ಪ್ರಕಾರ ಯಾವುದೇ ವಾಟ್ನಿ ಪತ್ರ ಆಗಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಅಕ್ಕ ತಂಗಿಯರು ಅದಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

3. ನಾನು ಮತ್ತು ಖಲೀಲ ಸಾಬ್ ಆತ್ಮೀಯ ಗೆಳೆಯರು ಎಂದರೆ ಸರಿ. ವಾದಿಯ ಹಕ್ಕನ್ನು ತಪ್ಪಿಸುವ ಉದ್ದೇಶದಿಂದ ನಾನು ಮತ್ತು 5 ನೇ ಪ್ರತಿವಾದಿ ಸೇರಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿ ಪಿ -37 ರಲ್ಲಿರುವ ಒಟ್ಟು 13 ಪೋಟೋಗಳು ವಿ ಪಿ ಸಿ ನಂ.702/12 ಎ ಇದಕ್ಕೆ ಸಂಬಂದಿಸಿದ್ದು ಅಲ್ಲ. ನಾನು ಆ ಮನೆಯನ್ನು ನೋಡಿದ್ದೇನೆ. ನಿ ಪಿ -37 ರಲ್ಲಿರುವ ಪೋಟೋಗಳು ಆ ಮನೆಗೆ ಸಂಬಂದಿಸಿದವು ಎಂದರೆ ಸರಿಯಲ್ಲ. ನಾನು ಖರೀದಿಸಿದ ಮನೆಯ ಪೋಟೋಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಖರೀದಿ ಪತ್ರ ಮತ್ತು ಅದಲು ಬದಲು ಪತ್ರಗಳನ್ನು ವಾದಿಯ ಹಕ್ಕನ್ನು ನಷ್ಟ ಮಾಡುವ ಉದ್ದೇಶದಿಂದ ನಾನು ಮತ್ತು 5 ನೇ ಪ್ರತಿವಾದಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಖರೀದಿ ಆದ ನಂತರ ನನ್ನ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿ ಇ ಸ್ವತ್ತು ನನ್ನ ಹೆಸರಿನಲ್ಲಿ ಆಗಿತ್ತು. ಆ ಬಗ್ಗೆ ದಾಖಲೆ ಕೊಟ್ಟಿಲ್ಲ. ಆ ಮನೆಯಲ್ಲಿ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ವಿ ಪಿ ಸಿ ನಂ.702/12 ಎ ದಲ್ಲಿ ನಾನು ಯಾವತ್ತು ವಾಸವಿರಲಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ಆ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಈಗ 11 ನೇ ಪ್ರತಿವಾದಿ ವಾಸವಿರುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ 5 ನೇ ಪ್ರತಿವಾದಿ ಮಾರಾಟ ಮಾಡಿರುವುದು ಕಾನೂನು ಬಾಹಿರ ಇರುತ್ತದೆ ಎಂದರೆ ಸರಿಯಲ್ಲ.

**1,5,11 ನೇ ಪ್ರತಿವಾದಿಯರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಅವರ ವಕೀಲರು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಜೆ.ವಿ.ಕುಲಕರ್ಣಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.